<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.196/2014

ಚಾಸಾ-1 ಪ್ರಾಸಾ-10

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 17.12.2019

ಹೆಸರು : ಮಹ್ಮದ ಇಬ್ರಾಹಿಂ

ತಂದೆ ಹೆಸರು : ಮಹ್ಮದ ಖಾಜಾ

ವಯಸ್ಸು : 78-ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ವಿಜಯಪೂರ

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿ ಗೊತ್ತಿಲ್ಲ. ನಾನು 20-ವರ್ಷದಿಂದ ಟ್ರಾನ್ಸಪೋರ್ಟ ವ್ಯಾಪಾರ ಮಾಡುತ್ತೇನೆ. 3-4 ವರ್ಷಗಳ ಹಿಂದೆ 460 ಸಕ್ಕರೆ ಚೀಲಗಳು ಕಳವಾದ ಬಗ್ಗೆ ದೂರನ್ನು ಸಲ್ಲಿಸಿದ್ದು. ಸಾಕ್ಷಿ ಪಿರ್ಯಾದಿಯನ್ನು ಮತ್ತು ಅದರ ಮೇಲಿನ ತನ್ನ ಸಾಕ್ಷಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-18ಬಿ ಎಂದು ಗುರುತಿಸಲಾಯಿತು. ಪಿರ್ಯಾದಿಯಲ್ಲಿರುವ ಸಂಗತಿಗಳು ಈಗ ನೆನಪಿಲ್ಲ.

(ಈ ಹಂತದಲ್ಲಿ ಮಾನ್ನ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ಬಿಜಾಪೂರದಲ್ಲಿ ತುಳಜಾಭವಾನಿ ರಸ್ತೆಯಲ್ಲಿ ಟ್ರಾನ್ಸಪೊರ್ಟ ಕಂಪನಿಯಿದ್ದು ನಮ್ಮ ಕಂಪನಿಯಿಂದ ಸಕ್ಕರೆಯನ್ನು ಬೆಂಗಳೂರು, ಹೈದರಾಬಾದ, ಹುಬ್ಬಳ್ಳಿ ಬೇರೆ ಸಕ್ಕರೆ ಪ್ಯಾಕ್ಟರಿಗಳಿಂದ ಖರೀದಿಸಿ ಸಾಗಾಟ ಮಾಡುತ್ತೇವೆ ಎಂದರೆ ಸರಿ. ರೇಣುಕಾ ಶುಗರ್ಸ ಹಾವಳಗಾ ಕಂಪನಿಯಿಂದ ಸಕ್ಕರೆ ಖರೀದಿಸಲು ನಮ್ಮದೇ ಟೆಂಡರ ಇತ್ತು ಎಂದರೆ ಸರಿ. ಹಾಸಿಮ ಎಂಬುವನನ್ನು ಲಾರಿಗಳಿಗೆ ಸಕ್ಕರೆ ತುಂಬಿಸಿ ಕಳುಹಿಸುತ್ತಿದ್ದನು.

ದಿನಾಂಕ 18.12.2010 ರಂದು ಸಾಯಂಕಾಲ 4.30 ಗಂಟೆಗೆ ಲಾರಿ ನಂ.ಕೆಎ-25/ಬಿ-2247 ರಲ್ಲಿ ಸಕ್ಕರೆ ತುಂಬಿಸಲು ಕಳುಹಿಸಿದ್ದೆವು ಎಂದರೆ ಸರಿ. ಅದರ ಚಾಲಕ ರೇಣುಕಪ್ಪ ಹೇಮಪ್ಪ ಕಂಬಾರ ಇದ್ದ ಎಂದರೆ ನನಗೆ ನೆನಪಿಲ್ಲ. ಲಾರಿ ಮಾಲಿಕ, ಚಾಲಕ ಸೇರಿ ಆ ದಿನ ರೇಣುಕಾ ಸುಗರ್ಸಗೆ ಬಂದಿದ್ದರು ಎಂದರೆ ಸರಿಯಲ್ಲ. ಹಾಸಿಮ ಎಂಬುವವನು ಲಾರಿಯ ದಾಖಲೆಗಳನ್ನು ತೋರಿಸಿ 50 ಕೆಜಿ 460 ಸಕ್ಕರೆ ಚೀಲಗಳನ್ನು ತುಂಬಿಕೊಂಡು ಬಂದಿದ್ದನು ಎಂದರೆ ಸರಿ. ಅದನ್ನು ಲೋಡ ಮಾಡಿದ ನಂತರ ಪ್ಯಾಕ್ಟರಿ ಹೊರಗಡೆ ಬಂದು ಟೈಯರ್ ಪಂಚರ್ ಆಗಿದೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಮರು ದಿವಸ ದಿನಾಂಕ 19.12.2010 ರಂದು ಬೆಳಿಗ್ಗೆ ಹಮೀದ ಗೋಲಾ ನನಗೆ ಕರೆ ಮಾಡಿ ಸಕ್ಕರೆ ತುಂಬಿದ ಲಾರಿ ರೈಲ್ವೆ ಸ್ಟೇಷನಗೆ ಬಂದಿಲ್ಲವೆಂದು ತಿಳಿಸಿದನು ಎಂದರೆ ಸರಿ. ನಾನು ಹಾಸೀಮನನ್ನು ವಿಚಾರಿಸಲಾಗಿ ಸಕ್ಕರೆ ತುಂಬಿದ ಲಾರಿಯ ದಾಖಲಾತಿಗಳನ್ನು ನೀಡಿರುತ್ತಾನೆ. ಸದರಿ ಲಾರಿಯ ದಾಖಲಾತಿಗಳಲ್ಲಿ ಕೆಎ-25/ಬಿ-2241 ಬರೆದಿದ್ದನ್ನು ಕೆಎ-25/ಬಿ-2247 ಎಂಬುದಾಗಿ ತಿದ್ದಿರುವ ವಿಚಾರ ನನಗೆ ಗೊತ್ತಾಯಿತು. ಹಾಸೀಮನು ಲಾರಿ ನೋಡಿದರೆ

ಗುರುತಿಸುತ್ತೇನೆ ಎಂದು ನನಗೆ ತಿಳಿಸಿದನು. ಆರ್ ಟಿ ಓ ಗೆ ಹೋಗಿ ಕೆಎ-25/ಬಿ-2247 ಲಾರಿ ಮಾಲಿಕರ ಹೆಸರು ಪರಿಶೀಲಿಸಲಾಗಿ ಅದು ಶ್ರೀರಾಮ ಪೈನಾನ್ಸನ ಹೆಸರಿನಲ್ಲಿರುವುದು ಕಂಡುಬಂತು ಎಂದರೆ ಸರಿ. ಅದರ ಮಾಲಿಕ ಉಮೇಶ ರಾಮಚಂದ್ರ ರಾಠೋಡ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಉಮೇಶ ರಾಮಚಂದ್ರ ರಾಠೋಡ ಹಾಗೂ ರೇಣುಕಪ್ಪ ಹೇಮಪ್ಪ ಕಂಬಾರ ರವರು ದಾಖಲಾತಿಗಳನ್ನುತಿದ್ದಿ ಸಕ್ಕರೆ ಚಿಲಗಳನ್ನು ಮಾರಾಟ ಮಾಡಿ ಮೋಸ ಮಾಡಿದ ವಿಷಯ ನನಗೆ ಗೊತ್ತಾಗಿ ನಂತರ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯದಲ್ಲಿರುವ ಆರೋಪಿತನು ಉಳಿದ ಆರೋಪಿತರೊಂದಿಗೆ ಶಾಮೀಲಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಲಾರಿಯ ಪೋಟೊಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಸಿಐಪಿ ವಕೀಲರಿಂದ

ಉಮೇಶ ರಾಮಚಂದ್ರ ರಾಠೋಡ ಹಾಗೂ ರೇಣುಕಪ್ಪ ಹೇಮಪ್ಪ ಕಂಬಾರ ರವರ ವಿರುದ್ಧ ಮಾತ್ರ ದೂರು ನೀಡಿರುತ್ತೇನೆ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸರಿ ಇದೆ

ಸಿವಿಲ್ ಮತ್ತು
ಪ್ರ.ದ.ನ್ಯಾ.
ದಂಡಾಧಿಕಾರಿಗಳು
ಅಫಜಲಪೂರ